ಅ) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಹೆಚ್ಚುವರಿ ಹಾಸಿಗೆಗಳನ್ನು ಮಂಜೂರು ಮಾಡಬೇಕೆನ್ನುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಎಷ್ಟು ಹೆಚ್ಚುವರಿ ಹಾಸಿಗೆಗಳನ್ನು ಮಂಜೂರು ಮಾಡಲಾಗಿದೆ (ವಿವರ ನೀಡುವುದು)

ಇ) ಮಂಜೂರಾತಿ ನೀಡದಿದ್ದ ಕಾರಣಗಳೇನು?

ಡಾ : ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಮಂತ್ರಿಗಳು, ಶಾಸಕರು ಹಾಗೂ ಇತರರಿಂದ ಹಲವಾರು ಬೇಡಿಕೆಗಳು ಬಂದಿರುತ್ತವೆ. ಸದರಿ ಬೇಡಿಕೆಗಳನ್ನು ಅವಶ್ಯಕತೆಗನುಗುಣವಾಗಿ ಮತ್ತು ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಮೇಲ್ದರ್ಜೆಗೇರಿಸುವ ಕಾರ್ಯವನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು.

ಆ) ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ :- ರಾಜ್ಯದಲ್ಲಿರುವ ಕೇಂದ್ರ ಗ್ರಂಥಾಲಯಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1040 (1935)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಒಟ್ಟು ಎಷ್ಟು ನಗರ ಕೇಂದ್ರ ಗ್ರಂಥಾಲಯಗಳಿವೆ? (ಜಿಲ್ಲಾವಾರು ಮಾಹಿತಿ ನೀಡುವುದು)

2. 1996-97 ನೇ ಸಾಲಿನಲ್ಲಿ ಎಷ್ಟು ನಗರ ಕೇಂದ್ರ ಗ್ರಂಥಾಲಯಗಳನ್ನು ತೆಗೆಯುವ ಪ್ರಸ್ತಾವನೆ ಸರ್ಕಾರದವರ ಮುಂದಿದೆಯೇ. (ವಿವರ ನೀಡುವುದು)?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :-

ಉ 15

ಬೆಂಗಳೂರು ನಗರ-5, ದಾವಣಗೆರೆ-1, ಕೆ.ಜಿ.ಎಫ್.-1, ಶಿವಮೊಗ್ಗ-1, ಬೆಳಗಾಂ-1, ಬಿಜಾಪುರ-1, ಧಾರವಾಡ-1, ಗುಲ್ಬರ್ಗಾ-1, ಮೈಸೂರು-1, ಮಂಗಳೂರು-1, ಹಾಸನ-1,

ಆ) ಇಲ್ಲಾ.